ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 24–11–2018

## ಪತ್ರಿಕಾ ಆಮಂತ್ರಣ

1. ಸಂವಿಧಾನ ದಿನದ ಅಂಗವಾಗಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಉನ್ನತ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸಲು ಜಾರಿಗೆ ತರುತ್ತಿರುವ ಯೋಜನೆಯ ಲೋಕಾರ್ಪಣೆ:

   ಡಾ. ಜಿ. ಪರಮೇಶ್ವರ್, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

   ಉಪಸ್ಥಿತರು:
   ಪ್ರಿಯಾಂಕ್ ಖರ್ಗೆ, ಸಮಾಜ ಕಲ್ಯಾಣ ಸಚಿವರು.

   ದಿನಾಂಕ: 26–11–2018, ಸೋಮವಾರ, ಸಮಯ: ಬೆಳಿಗ್ಗೆ 9–30 ಗಂಟೆಗೆ
   ಸ್ಥಳ: ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು.

2. ಕನ್ನಡ ಮತ್ತು ಸಂಸ್ಕೃತಿ ಇಲಾಖಾವತಿಯಿಂದ
   ಸಂತ ಶ್ರೇಷ್ಠ ಕನಕದಾಸರ ಜಯಂತಿ – 2018

   ‘ಕನಕ ಶ್ರೀ’ ಪ್ರಶಸ್ತಿ ‘ಕನಕ ಗೌರವ’ ಹಾಗೂ ‘ಕನಕ ಯುವ ಪುರಸ್ಕಾರ’ ಪ್ರದಾನ ಸಮಾರಂಭ:

   **ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ:**
   ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಘನ ಉಪಸ್ಥಿತಿ:**
ಡಾ. ಜಿ. ಪರಮೇಶ್ವರ್,
ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ:
ಡಾ. ಉದಯ್ ಬಿ. ಗರುಡಾಚಾರ್,
ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ದಿನಾಂಕ: 26-11-2018, ಸೋಮವಾರ, ಸಮಯ: ಮಧ್ಯಾಹ್ನ 12-00 ಗಂಟೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

3. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಮತೀಯ ಅಲ್ಪಸಂಖ್ಯಾತರಿಗೆ ಟ್ಯಾಕ್ಸಿ ವಿತರಿಸುವ ಕಾರ್ಯಕ್ರಮ:

ಟ್ಯಾಕ್ಸಿ ವಿತರಣೆ:
ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 27-11-2018, ಮಂಗಳವಾರ, ಸಮಯ: ಬೆಳಿಗ್ಗೆ 9-00 ಗಂಟೆಗೆ
ಸ್ಥಳ: ವಿಧಾನಸೌಧದ ಮುಂಭಾಗ, ಬೆಂಗಳೂರು

4. ಕನ್ನಡ ಮತ್ತು ಸಂಸ್ಕೃತಿ ಇಲಾಖಾವತಿಯಿಂದ ಡಾ. ರಾಮ ಮನೋಹರ ಲೋಹಿಯಾ ಸಮಗ್ರ ಸಾಹಿತ್ಯ, ಡಾ. ಚಂದ್ರಶೇಖರ ಕಂಬಾರ ಸಮಗ್ರ ಸಾಹಿತ್ಯ ಮತ್ತು ಮನೆಯಂಗಳದಲ್ಲಿ ವಿಜ್ಞಾನ ಮಾಲಿಕೆ ಕಿರುಪುಸ್ತಕಗಳ ಲೋಕಾರ್ಪಣೆ:

ಪುಸ್ತಕಗಳ ಲೋಕಾರ್ಪಣೆ:
ಡಾ. ಜಯಮಾಲಾ ರಾಮಚಂದ್ರ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮಕ್ಕಳ ಅಬಿವೃದ್ಧಿ ಮತ್ತು ಹಿರಿಯ ನಾಗರೀಕರ ವಿಕಲಚೇತನರ ಕಲ್ಯಾಣ ಸಚಿವರು.

ಗೌರವ ಉಪಸ್ಥಿತಿ:
ಡಾ. ಚಂದ್ರಶೇಖರ ಕಂಬಾರ, ಅಧ್ಯಕ್ಷರು, ಕೇಂದ್ರ ಸಾಹಿತ್ಯ ಅಕಾಡೆಮಿ

ದಿನಾಂಕ: 27-11-2018, ಮಂಗಳವಾರ, ಸಮಯ: ಸಂಜೆ: 4-00 ಗಂಟೆಗೆ
ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಬೆಂಗಳೂರು.

ಸಂಖ್ಯೆ:

**<u>ಪತ್ರಿಕಾ ಪ್ರಕಟಣೆ</u>**

## ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭತ್ತ ಖರೀದಿ

**-ಸಚಿವ ಬಂಡೆಪ್ಪ ಖಾಶೆಂಪೂರ**

ಬೆಂಗಳೂರು, ನವೆಂಬರ್ 24, (ಕರ್ನಾಟಕ ವಾರ್ತೆ)

ಭತ್ತ ಖರೀದಿಗೆ ರೈತರಿಂದ ಬೇಡಿಕೆ ಬಂದಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭತ್ತ ಖರೀದಿಸಲು ಮುಂದಾಗಿದೆ ಎಂದು ಸಹಕಾರ ಸಚಿವರಾದ ಬಂಡೆಪ್ಪ ಖಾಶೆಂಪೂರ ಅವರ ತಿಳಿಸಿದ್ದಾರೆ.

ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಬೆಲೆ ಕುಸಿದಾಗ ಬೆಲೆಗಳ ಸ್ಥಿರೀಕರಣಕ್ಕಾಗಿ ಬೆಂಬಲ ಬೆಲೆ ನಿಗದಿಪಡಿಸುವ ಕುರಿತು ಪರಿಶೀಲಿಸಲು ರಚಿಸಿರುವ ಸಚಿವ ಸಂಪುಟದ ಉಪ ಸಮಿತಿ ಸಭೆ ಇಂದು ವಿಧಾನಸೌಧದಲ್ಲಿ ನಡೆದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಶ್ರೀ ಬಂಡೆಪ್ಪ ಖಾಶೆಂಪೂರ ರವರು ರಾಜ್ಯದಲ್ಲಿ 10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬಿತ್ತನೆಯಾಗಿದ್ದು, ಇದರಿಂದ 45 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಗುರಿ ಹೊಂದಲಾಗಿದೆ ಎಂದರು.

ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರ 2 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಸಲು ಅನುಮತಿ ಸಿಕ್ಕಿದೆ. ದೇಶದಲ್ಲಿಯೇ ಪ್ರಥಮ ಬಾರಿಗೆ ಅಕ್ಕಿ ಗಿರಣಿ (ಮಿಲ್) ನಿಂದಲೇ ಖರೀದಿಸಲಾಗುತ್ತದೆ. ಖರೀದಿಸಲು 2018 ರ ಡಿಸೆಂಬರ್ 5 ರಿಂದ ಖರೀದಿ ಕೇಂದ್ರದಲ್ಲಿ ರೈತರು ನೊಂದಾಯಿಸಿಕೊಳ್ಳಲು ಅನುಮತಿ ನೀಡಲಾಗುತ್ತಿದೆ. ಒಟ್ಟು 10 ದಿನಗಳ ಕಾಲ ನೊಂದಣಿ ಪ್ರಕ್ರಿಯೆ ನಡೆಯಲಿದ್ದು, 2018 ಡಿಸೆಂಬರ್ 15 ರಿಂದ ಖರೀದಿಗೆ ಚಾಲನೆ ನೀಡಲಾಗುತ್ತದೆ. ಸದ್ಯ ಮಾರುಕಟ್ಟೆಯಲ್ಲಿ ಭತ್ತ ಪ್ರತಿ ಕ್ವಿಂಟಾಲ್‌ಗೆ 1300-1400 ರೂ.ಗಳಿದ್ದು, ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ. 1750 ರೂ.ಗಳಿಗೆ ಖರೀದಿಸಲಾಗುತ್ತದೆ.

ಈರುಳ್ಳಿ ಬೆಲೆ ಕುಸಿತ ಕಂಡಿದ್ದು, ರೈತರನ್ನು ಸಂಕಷ್ಟದಿಂದ ಪಾರು ಮಾಡಬೇಕು ಎಂದು ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿರವರು ಈಗಾಗಲೇ ತಿಳಿಸಿದ್ದಾರೆ. ಅವರ ನಿರ್ದೇಶನದಂತೆ ಯಾವ ರೀತಿ ಮಾವುಗೂ ಬೆಂಬಲ ಬೆಲೆ ನೀಡಲಾಗಿದೆಯೋ ಅದೇ ರೀತಿ ಈರುಳ್ಳಿಗೂ ನೀಡಲು ಚಿಂತಿಸಲಾಗಿದೆ. ಈಗ ನಡೆದ ಸಭೆಯಲ್ಲಿ ಇದರ ಬಗ್ಗೆ ಚರ್ಚಿಸಲಾಗಿದ್ದು, ಇವರ ಸಂಬಂಧ ಪ್ರಸ್ತಾವನೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಇಂದು ಸಂಜೆ ವೇಳೆಗೆ ಸಲ್ಲಿಸಲಾಗುವುದು.

ಉದ್ದು ಮತ್ತು ಸೋಯಾ ಖರೀದಿಸಲು ನೋಂದಣಿ ಕಾರ್ಯ ಮುಗಿದಿದ್ದು, ನಾಳೆಯಿಂದಲೇ ಖರೀದಿ ಪ್ರಾರಂಭವಾಗುತ್ತದೆ. ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಉದ್ದು ಪ್ರತಿ ಕ್ವಿಂಟಾಲ್‌ಗೆ ರೂ. 5600 ಹಾಗೂ ಸೋಯಾಗೆ ಪ್ರತಿ ಕ್ವಿಂಟಾಲ್‌ಗೆ ರೂ. 3399 ಇದೆ. ರೈತರಿಂದ ಖರೀದಿಸಲು 15 ದಿನಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ. ಇನ್ನು ಹೆಸರು ಕಾಳು ಖರೀದಿ ಖೋಟವನ್ನು ಕೇಂದ್ರ 28 ಲಕ್ಷ ಮೆಟ್ರಿಕ್ ಟನ್‌ಗೆ ನೀಡಿತ್ತು. ಅದನ್ನು ಸಂಪೂರ್ಣ ಖರೀದಿಸಲಾಗಿದ್ದು, ರೈತರ ಬಳಿ ಇನ್ನು ಹೆಸರು ಕಾಳು ಉಳಿದಿದ್ದು, ಅದನ್ನು ಖರೀದಿಸಲು ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಇದೇ ನವೆಂಬರ್ 28 ರಂದು ದೆಹಲಿಗೆ ತೆರಳುವುದಾಗಿ ಸಚಿವರು ತಿಳಿಸಿದರು.

ತೊಗರಿ ಬೆಳೆಯನ್ನು 15.56 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭಿತ್ತನೆ ಮಾಡಲಾಗಿದೆ. 11.34 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಗುರಿ ಹೊಂದಿದ್ದು, ಈಗ ಮಾರುಕಟ್ಟೆಯಲ್ಲಿ ತೊಗರಿಗೆ ಪ್ರತಿ ಕ್ವಿಂಟಾಲ್‌ಗೆ ರೂ. 4300/-ಗಳಿದ್ದು, ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ. 5675/- ನೀಡಲಾಗುತ್ತದೆ. ಖರೀದಿಗೆ ಇನ್ನು ಒಂದು ತಿಂಗಳು ಕಾಲಾವಕಾಶವಿದ್ದರೂ, ರಾಜ್ಯ ಸರ್ಕಾರ ಕೇಂದ್ರಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಖರೀದಿ ಕೇಂದ್ರ ತೆರೆಯಲು ಅನುಮತಿಯನ್ನು ಸಹ ಕೇಳಲಾಗಿದೆ. ಮೆಕ್ಕೆಜೋಳವನ್ನು ಸಹ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲು ಸರ್ಕಾರ ಚಿಂತನೆ ನಡೆಸಿದೆ.

ಆಯಾ ಪ್ರದೇಶಗಳಲ್ಲಿ ಬೆಳೆದಿರುವ ಬೆಳೆಗಳಿಗೆ ಸಂಬಂಧಿಸಿದಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಖರೀದಿ ಕೇಂದ್ರ ಗುರುತಿಸಲು ಸೂಚನೆ ನೀಡಲಾಗಿದೆ.

ಇಂದು ನಡೆದ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಕೃಷ್ಣಬೈರೇಗೌಡ, ತೋಟಗಾರಿಕೆ ಸಚಿವರಾದ ಎಂ.ಸಿ. ಮನಗೂಳಿ, ಐಎಎಸ್ ಅಧಿಕಾರಿಗಳಾದ ಡಾ. ಎನ್. ನಾಗಾಂಭಿಕದೇವಿ, ಮಹೇಶ್ವರರಾವ್, ಏಕರೂಪ್‌ಕೌರ್ ಸೇರಿದಂತೆ ಎ.ಪಿ.ಎಂ.ಸಿ.ಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

# ಕ್ರಾಫ್ಟ್‌ಕೋರ್ಸ್ ಟೈಲರಿಂಗ್ ಥಿಯರಿ ಪರೀಕ್ಷೆ

ಬೆಂಗಳೂರು, ನವೆಂಬರ್ 24, (ಕರ್ನಾಟಕ ವಾರ್ತೆ)

2018 ರ ಡಿಸೆಂಬರ್ ತಿಂಗಳಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಒಂದು ವರ್ಷದ ಕ್ರಾಫ್ಟ್‌ಕೋರ್ಸ್ ಟೈಲರಿಂಗ್ ಥಿಯರಿ ಪರೀಕ್ಷೆಯು ದಿನಾಂಕ: 6-12-2018 ರ ಗುರುವಾರ ದಂದು ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 2-00 ಗಂಟೆಯವರೆಗೆ ನಡೆಯಲಿದೆ.

ದಿನಾಂಕ: 6-12-2018 ರ ನಂತರ ಪ್ರಾಯೋಗಿಕ ಪರೀಕ್ಷೆಗಳು ನಡೆಯುತ್ತವೆ. ಸದರಿ ವೇಳಾಪಟ್ಟಿಯನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು/ಅಧಿಕಾರಿಯವರು ಪ್ರಕಟಿಸುವರು. ಸಂಬಂಧಿಸಿದ ವಿದ್ಯಾರ್ಥಿಗಳು ಪ್ರವೇಶ ಪತ್ರಗಳಿಗೆ ಆಯಾ ಸಂಸ್ಥೆ/ಪರೀಕ್ಷಾ ಕೇಂದ್ರಗಳನ್ನು ಸಂಪರ್ಕಿಸಿ ಪ್ರವೇಶ ಪತ್ರಗಳನ್ನು ಪಡೆಯಬಹುದಾಗಿದೆ ಎಂದು ತಾಂತ್ರಿಕ ಪರೀಕ್ಷಾ ಮಂಡಳಿಯ ಪ್ರಕಟಣೆ ತಿಳಿಸಿದೆ.

# ಗಜ ಚಂಡಮಾರುತ – ತಮಿಳುನಾಡಿಗೆ ಬೆಸ್ಕಾಂ ನೆರವು

ಬೆಂಗಳೂರು, ನವೆಂಬರ್ 24, (ಕರ್ನಾಟಕ ವಾರ್ತೆ)

ಗಜ ಚಂಡಮಾರುತದಿಂದ ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿ ಸುರಿಯುತ್ತಿರುವ ಭಾರೀ ಮಳೆಗೆ ಸಿಲುಕಿದ ಜಿಲ್ಲೆಗಳಲ್ಲಿ ಹಾನಿಗೊಳಗಾದ ವಿದ್ಯುತ್ ಸಂಪರ್ಕವನ್ನು ಪುನರ್ ಸ್ಥಾಪಿಸಲು ತಮಿಳುನಾಡು ಸರ್ಕಾರದ ಕೋರಿಕೆಯ ಮೇರೆಗೆ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ ಬೆಸ್ಕಾಂ ಮುಂದಾಗಿದೆ.

ಗಜ ಚಂಡ ಮಾರುತದಿಂದ ತಮಿಳುನಾಡಿನ ತಂಜಾವೂರು, ತಿರುವರೂರು, ಪುಟುಕೊಟ್ಟೈ, ನಾಗಪಟ್ಟಣಂ ಹಾಗೂ ದಿಂಡಿಗಲ್ ಜಿಲ್ಲೆಗಳಲ್ಲಿ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಗೆ ಹಾನಿಗೊಳಗಾದ 1 ಲಕ್ಷಕ್ಕೂ ಹೆಚ್ಚು ವಿದ್ಯುತ್ ಕಂಬಗಳನ್ನು ಪುನರ್ ಸ್ಥಾಪಿಸಿ ಸಮಾರೋಪಾದಿಯಲ್ಲಿ ವಿದ್ಯುತ್ ಸಂಪರ್ಕವನ್ನು ಪುನ: ಸ್ಥಾಪಿಸಲು ಬೆಂಗಳೂರು ಮೆಟ್ರೋ ಪ್ರದೇಶದ ಉತ್ತರ ಹಾಗೂ ದಕ್ಷಿಣ ವಲಯಗಳ ಸುಮಾರು 600 ಗ್ಯಾಂಗ್‌ಮೆನ್‌ಗಳನ್ನು ಕಳುಹಿಸಲಾಗಿದೆ. ಪ್ರತಿಯೊಂದು ಗುಂಪಿನಲ್ಲೂ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್ ಮೇಲ್ವಿಚಾರಣೆಯಲ್ಲಿ ಇಬ್ಬರು ಅನುಭವಸ್ಥ ಸಿಬ್ಬಂದಿಯ ಜೊತೆಗೆ 20 ಹೊತಗುತ್ತಿಗೆಯಲ್ಲಿ ಪಡೆದಿರುವ ಗ್ಯಾಂಗ್‌ಮೆನ್‌ಗಳನ್ನು ಸಹ ನಿಯೋಜಿಸಲಾಗಿದೆ.

ಇಂತಹ ಎರಡು ತಂಡಗಳಿಗೆ ಒಬ್ಬರು ಸಹಾಯಕ ಕಾರ್ಯನಿರ್ವಾಹಕ ಇಂಜಿಯರ್ ಮುಖ್ಯಸ್ಥರಾಗಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

## ನಾಳೆ ಕಬ್ಬನ್ ಪಾರ್ಕ್‌ನಲ್ಲಿ ವಿಶೇಷ ಕಾರ್ಯಕ್ರಮಗಳು

ಬೆಂಗಳೂರು, ನವೆಂಬರ್ 24, (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 25–11–2018** ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಕವಿತ. ಕೆ. ರವರಿಂದ ಭರತನಾಟ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**ಬೆಂಗಳೂರು ಜಲಮಂಡಲಿ: ನವೆಂಬರ್ 27 ರಂದು ಸಕಾನಿಅ(ವಾಯುವ್ಯ-2), ಸಕಾನಿಅ(ಪಶ್ಚಿಮ-4) ಮತ್ತು ಸಕಾನಿಅ(ನೈರುತ್ಯ-4) ಉಪವಿಭಾಗಗಳಲ್ಲಿ ನೀರಿನ ಅದಾಲತ್**

ಬೆಂಗಳೂರು, ನವೆಂಬರ್ 24, (ಕರ್ನಾಟಕ ವಾರ್ತೆ)

ಬೆಂಗಳೂರು ಜಲಮಂಡಲಿಯ ಸಕಾನಿಅ(ವಾಯುವ್ಯ-2), ಸಕಾನಿಅ(ಪಶ್ಚಿಮ-4) ಮತ್ತು ಸಕಾನಿಅ(ನೈರುತ್ಯ-4) ಉಪವಿಭಾಗಗಳಲ್ಲಿ ಮಂಗಳವಾರ ದಿನಾಂಕ: 27.11.2018 ರಂದು ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ: 27.11.2018 ರಂದು ಸಕಾನಿಅ(ವಾಯುವ್ಯ-2) ಉಪವಿಭಾಗ ವ್ಯಾಪ್ತಿಗೆ ಬರುವ ಕಾಮಾಕ್ಷಿಪಾಳ್ಯ, ಕಮಲಾನಗರ, ಅಗ್ರಹಾರ ದಾಸರಹಳ್ಳಿ, ವೆಸ್ಟ್ ಆಫ್ ಕಾರ್ಡ್ ರಸ್ತೆ-1&2, ಸೇವಾಠಾಣೆಗಳಿಗೆ ಸಂಬಂಧಿಸಿದ ವಿವಾದಗಳನ್ನು ಮೋದಿ ಆಸ್ಪತ್ರೆ ಹಿಂಭಾಗ, ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ವಾಯುವ್ಯ-2) ಉಪವಿಭಾಗ ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯ ನಿರ್ವಾಹಕ ಅಭಿಯಂತರರು (ವಾಯುವ್ಯ-1): 23491123, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಾಯುವ್ಯ-2) ಉಪವಿಭಾಗ: 22945184.

ಸಕಾನಿಅ(ಪಶ್ಚಿಮ-4) ಉಪವಿಭಾಗ ವ್ಯಾಪ್ತಿಗೆ ಬರುವ ಚಂದ್ರಲೇಔಟ್-1, ವಿಜಯನಗರ, ಓ.ಹೆಚ್.ಟಿ ಸೇವಾಠಾಣೆಗಳಿಗೆ ಸಂಬಂಧಿಸಿದ ವಿವಾದಗಳನ್ನು ಅರ್ಕಾವತಿ ಭವನ, ನೆಲಮಹಡಿ, 5ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಆರ್.ಪಿ.ಸಿ ಲೇಔಟ್ ರಸ್ತೆ ಇಲ್ಲಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ-4) ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ): 22945171, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ-4) ಉಪವಿಭಾಗ: 23350020.

ಸಕಾನಿಅ(ನೈರುತ್ಯ-4) ಉಪವಿಭಾಗ ವ್ಯಾಪ್ತಿಗೆ ಬರುವ ಜೆ.ಪಿ.ನಗರ-1, ಜಯನಗರ 4ನೇ 'ಟಿ' ಬ್ಲಾಕ್, 4ನೇ ಬ್ಲಾಕ್, ಹೊಂಬೇಗೌಡನಗರ, ಭೈರಸಂದ್ರ ಸೇವಾಠಾಣೆಗಳಿಗೆ ಸಂಬಂಧಿಸಿದ ವಿವಾದಗಳನ್ನು ಕಪಿಲ ಭವನ, 1ನೇ ಮುಖ್ಯ ರಸ್ತೆ, 36ನೇ ಅಡ್ಡ ರಸ್ತೆ, ಹೆಡ್ ಪೋಸ್ಟ್ ಆಫೀಸ್ ಹತ್ತಿರ, 4ನೇ 'ಟಿ' ಬ್ಲಾಕ್, ಜಯನಗರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ-4) ಉಪವಿಭಾಗ ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯ ನಿರ್ವಾಹಕ ಅಭಿಯಂತರರು (ಆಗ್ನೇಯ-2); 22945389, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ-4) ಉಪವಿಭಾಗ: 22945148.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ;22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ;8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳ ಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## BWSSB:Water Adalath in AEE(North West-2), AEE(West-4) & AEE(South West-4) sub divisions on November 27th

Bengaluru, Nov 24, (Karnataka Information): BWSSB water Adalath is held on 27.11.2018 in AEE(North West-2), AEE(West-4) & AEE(South West-4) sub divisions from 9:30am to 11.00am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

Date:27.11.2018 the disputes of consumers of Kamakshi Palya, Kamalanagar, Agrahara Dasarahalli, West off chord road-1&2, Service station coming under AEE(North West-2) sub division, will be discussed in detail & problems will be settled in the office of the Assistant Executive Engineer (North West-2) sub division, behind Modi hospital, West off chord road.

Details regarding the adalath can be obtained by the office of EE(NorthWest-1): 23491123, or office of AEE (North West-2): 22945184.

The disputes of consumers of Chandra Layout-1, Vijayanagar OHT Service station coming under AEE(West-4) sub division, will be discussed in detail & problems will be

settled in the office of the Assistant Executive Engineer(West-4) sub division, Arkavathi Bhavan, Ground floor, 5th main, 9th cross, RPC Layout.

Details regarding the adalath can be obtained by the office of EE(West): 22945171, or office of AEE(West-4): 23350020.

The disputes of consumers of JP Nagar-1, Jayanagar 4th 'T' Block, 4th Block, Hombegowda Nagar, Byrasandra. Service station coming under AEE(South West-4) sub division, will be discussed in detail & problems will be settled in the office of the Assistant Executive Engineer (South West-4) sub division, Kapila Bhavana, 1st Main, 36th cross, Near Head Post office 4th 'T' Block.

Details regarding the adalath can be obtained by the office of EE(South East-2): 22945389, or office of AEE(South West-4): 22945148.

For any problems regarding the water supply and all, publics can contact 24x7 call centre: 22238888 helpline number: 1916 & whats app no: 8762228888.

Public can utilize this adalath facilities to solve the problems regarding water supply.

# ಕನಕದಾಸ ಜಯಂತಿ: ಕಂದಾಯ ಸಚಿವರ ಶುಭಾಶಯ

ಬೆಂಗಳೂರು, ನವೆಂಬರ್ 24, (ಕರ್ನಾಟಕ ವಾರ್ತೆ)

ಕನಕದಾಸ ಜಯಂತಿಯು ನಾಡಿನೆಲ್ಲೆಡೆ ಸದಾಲೋಚನೆ ಮತ್ತು ಸನ್ಮಾರ್ಗಗಳನ್ನು ಕುರಿತು ಸಾತ್ವಿಕವಾಗಿಆಲೋಚಿಸು ಪ್ರೇರಣೆಯನ್ನುಜನರಿಗೆ ನೀಡಲಿ ಎಂದು ಕಂದಾಯ ಸಚಿವ ಆರ್.ವಿ.ದೇಶಪಾಂಡೆ ಶುಭಕೋರಿದ್ದಾರೆ.

ಈ ಬಗ್ಗೆ ಸಂದೇಶ ನೀಡಿರುವಅವರು, "ಕನಕದಾಸರು ಭಕ್ತಿ ಮತ್ತು ಸಮರ್ಪಣಾ ಮನೋಭಾವಕ್ಕೆಇನ್ನೊಂದು ಹೆಸರಾಗಿದ್ದಾರೆ. ಅವರಜನುಮದಿನದ ಈ ಸಂದರ್ಭದಲ್ಲಿ ನಾವೆಲ್ಲರೂಅವರನ್ನುಅಂತರಂಗದಿಂದ ಸ್ಮರಿಸೋಣ," ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನವೆಂಬರ್ 27ರಂದು "ಸಂವಿಧಾನ ದಿನ"

ಬೆಂಗಳೂರು, ನವೆಂಬರ್ 24, (ಕರ್ನಾಟಕ ವಾರ್ತೆ)

ಪ್ರತಿವರ್ಷ ನವೆಂಬರ್ 26ರಂದು "ಸಂವಿಧಾನ ದಿನ"ವನ್ನು ಆಚರಿಸಲಾಗುತ್ತಿದ್ದು, ಈ ವರ್ಷ ನವೆಂಬರ್ 26 ಕನಕದಾಸ ಜಯಂತಿ ರಜಾ ದಿನವಾಗಿರುವುದರಿಂದ ನವೆಂಬರ್ 27ರಂದು ಆಚರಿಸಬಹುದಾಗಿದೆ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.